ನಿರುಕ್ತಾ, ಬೆಂಗಳೂರು

ಮನೆಯವರು ಮಲಗಿದ ನಂತರವೇ ಹೊರಬರುವ ಜಿರಳೆಗಳಿಗೆ ಅವರು ಮಲಗಿದ್ದಾರೆಂದು ಹೇಗೆ ತಿಳಿಯುತ್ತೆ?



ಬಚ್ಚಲಲ್ಲಿ ಪಾತ್ರೆ ತುಂಬಿದ, ಹೊದಿಕೆಯನ್ನು ಎಳೆದುಕೊಂಡಾಗಿನ ಕಂಪನ ಜಿರಳೆಮೀಸೆಗೆ ತಿಳಿಯುವುದಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಸ್ವರ್ಗ ಎಂದರೇನು?

ಮನಸ್ಸು, ದೇಹ ಸೊರಗದಂತಿರುವ ವಾತಾವರಣ.

ಮಧು ಹೆಚ್.ಡಿ. ಊರಿಲ್ಲ

ಕೆಲವೊಮ್ಮೆ ಮೌನವೇ ಉತ್ತರವಾಗಿರಬೇಕಂತೆ. ಆದರೆ ಕೆಲವು ಗೌರವಾನ್ವಿತರ ಅಹಿತಕರ ಪ್ರಶ್ನೆಗಳಿಗೆ ಉತ್ತರಿಸಬೇಕೋ, ಬೇಡವೊ?

ಆತ್ಮಗೌರವಕ್ಕೆ ಧಕ್ಕೆ ಬಂದಾಗ ಮೌನಾಸ್ತ್ರಕ್ಕಿಂತ ಉತ್ತರಶಸ್ತ್ರವೇ ಲೇಸು.

ಮಧುಮತಿ ಅಭಿಷೇಕ್, ಬೆಂಗಳೂರು

ಮನುಷ್ಯನಿಗೆ ರೆಕ್ಕೆಗಳಿದ್ದಿದ್ದರೆ ಆಕಾಶದಲ್ಲಿ ಟ್ರಾಫಿಕ್ ಜಾಮ್ ಆಗುತ್ತಿತ್ತೆ?



ಊಹೂಂ. ಆಗ ಪಕ್ಷಿಗಳು ಮನುಷ್ಯರಂತೆ ನಡೆದಾಡುತ್ತಿದ್ದವು, ವಿಮಾನ ಇರುತ್ತಿರಲಿಲ್ಲ.

ಪಿ. ಚಿದಾನಂದ, ಜೆ.ಜಿ. ಹಳ್ಳಿ

ಸುದ್ದಿವಾಹಿನಿಗಳು ಎರಡು ವಾಕ್ಯದ ಸುದ್ದಿಗಳನ್ನು ಹತ್ತು ಬಾರಿ ಪರದೆಯ ಮೇಲೆ ತೋರಿಸಿ, ಹತ್ತು ಬಾರಿ ಓದುವರಲ್ಲ?

ಅವರದು ಸುದ್ದಿಕಾಲೇ ಅಕ್ಷರಾಭ್ಯಾಸವಂತೆ.

ಗಂಜಾಂ ನಾಗರಾಜ, ಮೈಸೂರು

ಜೀವನದ ಅಂತ್ಯದಲ್ಲಿ ಬರುವ ಮೃತ್ಯು ವರವೋ ಶಾಪವೋ?

ವರವೇ– ಮಡಿಕೆಯವರಿಗೆ, ಮಸಣದವರಿಗೆ, ಅಪರಕರ್ಮದವರಿಗೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಒಂದು ವೇಳೆ ಭಗವಂತ ಮನುಷ್ಯನ ನೆನಪಿನ ಶಕ್ತಿಯನ್ನು ಇಂತಿಷ್ಟು ಎಂ.ಬಿ. ಎಂದು ಫಿಕ್ಸ್ ಮಾಡಿದರೆ ಗತಿಯೇನು?

ತಮ್ಮ ಎಂ.ಬಿ.ಗಳನ್ನು ಎಕ್ಸ್‌ಟರ್ನಲ್ ಮೆಮೊರಿಯಾಗಿ ಬಾಡಿಗೆಗೆ ಕೊಡುವವರು ಹುಟ್ಟಿಕೊಳ್ಳುತ್ತಾರೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಕ್ರಿಕೆಟ್ ಆಟಗಾರರು ನಿವೃತ್ತರಾಗುವಂತೆ ರಾಜಕಾರಣಿಗಳೇಕೆ ನಿವೃತ್ತರಾಗುವುದಿಲ್ಲ?

ಅವರ ಆಟ ಮುಗಿದಿರುತ್ತದೆ; ಇವರ ನವರಂಗಿ ಆಟಗಳಿಗೆ ಕೊನೆ ಇರುವುದಿಲ್ಲವಲ್ಲ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

ಕಾಡಿನಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಬೆಳದಿಂಗಳು ಏಕೆ?

ವಿರಹ ಎನ್ನುತ್ತಾ, ಕವನ ಗೀಚುತ್ತಾ ಇತರರಿಗೆ ತೊಂದರೆ ಕೊಡದೆ ತಮ್ಮಪಾಡಿಗೆ ಅನುಭವಿಸಲು.

ಬಿ.ಆರ್. ಉಷಾ, ಬೆಂಗಳೂರು

ನೀರಿನಲ್ಲಿರುವ ಮೀನಿಗೂ, ಜಮೀನಿನಲ್ಲಿರುವ ಮೀನಿಗೂ ವ್ಯತ್ಯಾಸವೇನು?

ಅವು ಬಂಗುಡೆ, ತಾಟೆ, ಐರ್ ಇವು ಭಾನಗಡಿ, ತಂಟೆ, ಐಲು.

ಅನಸೂಯ ಟಿ. ಕೇದಿಗೆಮನೆ

ಮೊದಲ ಪೂಜೆ ವಿನಾಯಕನಿಗೆ. ಕೊನೆಯ ಪೂಜೆ?

ಹೊಟ್ಟೆಪೂಜೆ.

ಪಿ. ಜಯವಂತ ಪೈ, ಕುಂದಾಪುರ

ಲಂಚ್‌ಗೂ ಲಂಚಕ್ಕೂ ವ್ಯತ್ಯಾಸವೇನು?

ಅಲ್ಲಿ ಬಿಸಿಯಾದ ಅನ್ನ ಬೇಕೆನಿಸುತ್ತದೆ, ಇಲ್ಲಿ ಬಿಸಿಯಾಗಿ ಅನ್ನಬೇಕೆನಿಸುತ್ತದೆ.

ಸೂರ್ಯಪ್ರಕಾಶ್, ಚೆನ್ನಾಗನಹಳ್ಳಿ

ಬೆಂಗಳೂರಿನ ಗುಂಡಿಗಳಿಗೆ ಮೆತ್ತಿರುವ ತಾರಿನ ಹೆಂಟೆಗಳ ಎಣಿಕೆ ಸುಲಭವೋ, ಆಕಾಶದ ನಕ್ಷತ್ರದ ಎಣಿಕೆ ಸುಲಭವೊ?

ನಕ್ಷತ್ರಗಳದ್ದೇ. ಅವು ದಿನೇ ದಿನೇ ಹೆಚ್ಚಾಗುವುದಿಲ್ಲ.

## ವಾರದ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು

‘ಗಂಡಸಾಗಿದ್ರೆ...’ ಎಂದು ಕೇಳೋ ಮಂದಿ ‘ಹೆಂಗಸಾಗಿದ್ರೆ...’ ಎಂದೇಕೆ ಕೇಳುವುದಿಲ್ಲ?

ಪೌರುಷ ಅನುಮಾನಾಸ್ಪದ, ಹೆಣ್ತನ ನಿಚ್ಚಳ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಈಗಿನ ಹೆಣ್ಣುಮಕ್ಕಳು ಮೈತುಂಬ ಬಟ್ಟೆ ಅಂದರೆ ಅಲರ್ಜಿ ಅಂತಾರಲ್ಲ, ಯಾಕೆ?

ಕಡಿಮೆ ತೊಟ್ಟರೂ ಕೆಟ್ಟ ದೃಷ್ಟಿಯಿಂದ ನೋಡದಂತಹ ನಾಗರಿಕರಿದ್ದಾರೆಂಬ ನಂಬಿಕೆ.

ಮಹಾವೀರ ಕಾಸರ, ಶಿವಮೊಗ್ಗ

ರಾತ್ರಿ ಉಳಿದ ಪಲ್ಯದಲ್ಲಿ ಸಮೋಸಾ ಮಾಡಿದರೆ ಬಾಯಿ ಚಪ್ಪರಿಸಿ ತಿನ್ನುತ್ತೇವಲ್ಲಾ...?

ಕಸದಲ್ಲಿ ರಸ ಕಾಣುವ ಗುಣ!

ಸಿ. ಆನಂದಪ್ಪ, ಬೆಂಗಳೂರು

ಭೀಷ್ಮರು ಶ್ರೀಕೃಷ್ಣನ ಮಹಿಮೆಯನ್ನು ಹೊಗಳಿದ್ದಾದರೂ ಏಕೆ?

ಕೆಟ್ಟಮೇಲೆ ಬುದ್ಧಿ ಬಂತು ಎಂಬುದಕ್ಕೆ



ಉದಾಹರಣೆ ಆಗಿರಲು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಹಾಸಿಗೆಗೆ ಗೊತ್ತಿರುವಷ್ಟು ಸುಖ ಹೃದಯಕ್ಕೂ ಗೊತ್ತಿಲ್ಲ ಎಂದೇಕೆ ಹೇಳುವರು?

ಹೃದಯಹೀನರೂ ಸುಖದಿಂದ ಇರುವುದನ್ನು ಹಾಸಿಗೆ ಕಂಡಿರುತ್ತದಲ್ಲ.

ಅಮರಯ್ಯಾ ಪತ್ರಿಮಠ, ಸುರಪುರ

ವಯಸ್ಸಿಗೂ, ಮನಸ್ಸಿಗೂ ಸಂಬಂಧವೇನು?

ಅಸ್ಥಿರತೆ. ಎರಡೂ ಪ್ರತಿ ನಿಮಿಷವೂ ಬದಲಾಗುತ್ತವೆ.

ಎನ್. ವೈದೇಹಿ, ಮೈಸೂರು

ಕೆಲವು ಪುರುಷರು ಕುಟುಂಬಕ್ಕಿಂತ ಅನ್ಯರೊಂದಿಗೆ ಹೆಚ್ಚು ಸಲಿಗೆ, ಪ್ರೀತಿಯಿಂದ ಮಾತಾಡಲು ಕಾರಣವೇನು?

ಸ್ಪ್ರಿಂಗ್ ಗುಣ. ಇಲ್ಲಿ ಒತ್ತಡದಲ್ಲಿರುವ ಮನ ಅಲ್ಲಿ ಅಷ್ಟಗಲ ಹರಡಿಕೊಳ್ಳುತ್ತದೆ.

■ ರಾಮ್